## ಬದುಕ ಮನ್ನಿಸು ಪ್ರಭುವೇ...

ಅಂಗಳದಲ್ಲಿ ಅಲೊವೆರಾ, ಕೋಣೆಗಳಲ್ಲಿ ಜೀಸಸ್ ಪ್ರತಿಮೆಗಳು, ಎದುರು ನಿಂತ ಚರ್ಚ್, ಹಿಂದೆ ಹರಿಯುವ ಸಮುದ್ರ...

'ವಾಹ್!'

'ಪಾಲ್, ಜೀವನ ನೋಡಲು ಎಷ್ಟು ಸರಳವೆಂದು ಅನ್ನಿಸುತ್ತದೆ...! ನನ್ನ ಮನೆಯ ಬಾಗಿಲನ್ನು ತೆರೆದೊಡನೆಯೇ ಮರ ಗಿಡಗಳಿಂದಾವೃತವಾದ ವಿಶಾಲ ಚರ್ಚ್‌ನ ಗೋಳಗುಮ್ಮಟ ಕಾಣುತ್ತಿತ್ತು. ನಾನು ಅದನ್ನೇ ನೋಡುತ್ತಿದ್ದೆ. ಸುತ್ತಮುತ್ತ ಪಸರಿಸಿದ ಹಸುರಿನಿಂದಾಗಿ, ಚರ್ಚಿನ ಸ್ಪಷ್ಟ ಆಕಾರವನ್ನು ಕಣ್ಣು ತುಂಬಿಕೊಳ್ಳಲು ಅದರ ಸಮೀಪಕ್ಕೇ ಹೋಗಬೇಕಿತ್ತು. ವನಸ್ಪತಿ ವಿಜ್ಞಾನದ ವಿದ್ಯಾರ್ಥಿಗಳು ತಮ್ಮ ಸಂಶೋಧನೆಗೆ ಅಲ್ಲಿಗೆ ಬರುತ್ತಿದ್ದರು.

ನಮ್ಮ ವಿವಾಹವಾಗಿ ಕೆಲವೇ ತಿಂಗಳುಗಳು ಕಳೆದಿದ್ದೆವು... ನನ್ನ ಮೇಲೆ ಎರಡನೆಯ ವಜ್ರಾಘಾತವಾಯಿತು.

ಪಾಲ್ ಕಣ್ಣುಗಳನ್ನು ತೆರೆದು ನನ್ನನ್ನೇ ಗಮನಿಸಿದ. ಅವನು ನನ್ನ ಕಣ್ಣುಗಳಲ್ಲಿದ್ದ ಕಣ್ಣೀರನ್ನು ನೋಡಬಾರದೆಂದು ನನ್ನ ಕತ್ತನ್ನು ಆಚೆಗೆ ಹೊರಳಿಸಿದೆ.

'ಏನಾಯ್ತು? ನಿಮ್ಮ ಪತಿ ಇಹಲೋಕವನ್ನು ತ್ಯಜಿಸಿದರೇ?'

'ಇಲ್ಲ ಪಾಲ್... ಅದು ಬಹುಶಃ ಇಷ್ಟು ಕಷ್ಟದಾಯಕವಾಗುತ್ತಿರಲಿಲ್ಲ...'

ನಾನು ನನ್ನನ್ನು ಸಂಭಾಳಿಸಿಕೊಂಡು ನನ್ನ ಕಥೆಯನ್ನು ಮುಂದುವರೆಸಿದೆ.

ಆ ದಿನವನ್ನು ನನ್ನಿಂದ ಮರೆಯಲಾಗುತ್ತಿಲ್ಲ... ಬೆಳಿಗ್ಗೆಯ ಹನ್ನೊಂದು ಗಂಟೆ... ಅಬ್ರಾಹಮ್ ಚರ್ಚ್‌ಗೆ ಹೋಗಿದ್ದರು. ಅಂದು ನನಗೆ ಮನೆಯನ್ನು ಸ್ವಚ್ಛಗೊಳಿಸುವ ಹುಚ್ಚು ಹಿಡಿದಿತ್ತು. ಎಲ್ಲಾ ಕೋಣೆಗಳನ್ನು ಗುಡಿಸಿ ಒರೆಸುತ್ತಿದ್ದೆ. ಕೊನೆಯಲ್ಲಿ ಅಬ್ರಾಹಮ್‌ನ ಸ್ಟಡಿ ರೂಮಿಗೆ ಹೋದೆ. ಆ ರೂಮಿಗೆ ನಾನು ಹೋಗುವುದು ಅಪರೂಪವಾಗಿತ್ತು. ಅಲ್ಲಿದ್ದ ಬುಕ್‌ರ್ಯಾಕನ್ನು ಸ್ವಚ್ಛಗೊಳಿಸುವಾಗ ಕೆಲವು ಬಣ್ಣ ಬಣ್ಣದ ಪುಸ್ತಕಗಳು ಜಾರಿ ಬಿದ್ದವು. ನಾನು ಅವಾಕ್ಕಾದೆ. ಹಲೆಲುಯಿಯಾ... (ದೇವರನ್ನು ಕರೆಯುವಾಗ ಕ್ರಿಶ್ಚಿಯನ್ನರು ಬಳಸುವ ಶಬ್ದ) — ನನ್ನ ಸುಂದರ ಮತ್ತು ಪವಿತ್ರ ಮನೆಯಲ್ಲಿ ಪೋರ್ನೋಗ್ರಫಿಯ ಪುಸ್ತಕಗಳೇನು ಮಾಡುತ್ತಿವೆ! ಪ್ರತಿಯೊಂದು ಪುಸ್ತಕದ ಮೇಲೆ ಒಂದು ಸೆಕ್ಸಿ ತಲೆಬರಹವಿತ್ತು. ಅವುಗಳ ಹೆಸರು ಹೇಳಲು ನಾನು ಬಯಸುವುದಿಲ್ಲ. ಪುಸ್ತಕಗಳು ತುಂಬಾ ಅಶ್ಲೀಲವಾಗಿದ್ದವು, ಕೆಲವು ಭಾಗಗಳ ಮೇಲೆ ಮಾರ್ಕ್ ಮಾಡಲಾಗಿತ್ತು, ಕೆಲವು ಸೆಕ್ಸ್ ದೃಶ್ಯಗಳ ಕೆಳಗೆ ಗೆರೆಗಳನ್ನು ಎಳೆಯಲಾಗಿತ್ತು. ಅಲ್ಲಿದ್ದ ಸೆಕ್ಸ್ ಶಬ್ದಗಳಲ್ಲಿ ಒಂದೆರಡು ಶಬ್ದಗಳನ್ನೂ ಓದದಾದೆ. ಅಬ್ರಾಹಮ್ ಪಾದರಿಯಾಗಿದ್ದು, ದಾರಿ ತಪ್ಪಿದ ವ್ಯಕ್ತಿಯೊಬ್ಬ ಸಲಹೆ ಪಡೆಯಲು ಅವರ ಬಳಿಗೆ ಬರುತ್ತಿರಬೇಕು, ಅಬ್ರಾಹಮ್ ಅವನಿಂದ ಈ ಪುಸ್ತಕಗಳನ್ನು ವಶಪಡಿಸಿಕೊಂಡಿರಬೇಕು ಎಂದು ನಾನು ಯೋಚಿಸಿದೆ. ಮನೆಯಲ್ಲಿ ಈ ವಿಷಯದ ಬಗ್ಗೆ ಚರ್ಚಿಸುವುದು ವರ್ಜಿತ ಎಂಬುದು ನನಗೆ ತಿಳಿದಿತ್ತು, ಆದರೆ ಬಹುತೇಕ ಭಕ್ತರು ಅಬ್ರಾಹಮ್ ಬಳಿ ನಾನಾ ರೀತಿಯ ಚರ್ಚೆಗಳನ್ನು ಮಾಡುತ್ತಾರೆ. ಸಾಮಾನ್ಯವಾಗಿ ಧರ್ಮಾಧ್ಯಕ್ಷರು ಭಕ್ತರ ಸಮಸ್ಯೆಗಳನ್ನು ಕೇಳುತ್ತಾರೆ. ಅಲ್ಲದೆ ಜನ ಸೆಕ್ಸ್ ವಿಷಯಗಳಲ್ಲಿಯೂ ಅವರ ಸಲಹೆಯನ್ನು ಪಡೆಯುತ್ತಾರೆ.

ಅಬ್ರಾಹಮ್ ಚರ್ಚ್‌ನಿಂದ ಮರಳಿ

